ಪ್ರಜಾವಾಣಿ

### ಬೆಂಗಳೂರಿನ ಇಎಸ್‌ಐಸಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಭಾರತಿ ಅಭಿಪ್ರಾಯ

# ಶಿಕ್ಷಣದ ಜತೆಗೆ ವೃತ್ತಿ ಕೌಶಲ ತರಬೇತಿ ಅಗತ್ಯ

ಪ್ರಜಾವಾಣಿ ವಾರ್ತೆ





ಕೋಲಾರದಲ್ಲಿ ಮಂಗಳವಾರ ನಡೆದ ದೇವರಾಜ ಅರಸು ನರ್ಸಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ ಬೆಂಗಳೂರಿನ ಇಎಸ್‌ಐಸಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಭಾರತಿ ನರ್ಸಿಂಗ್ ಪದವೀಧರರಿಗೆ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದರು (ಎಡಚಿತ್ರ). ನರ್ಸಿಂಗ್ ಪದವೀಧರರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು

ಕೋಲಾರ: 'ಶುಶ್ರೂಷಕಿಯರು ಶಿಕ್ಷಣದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆಯುವುದು ಅಗತ್ಯ' ಎಂದು ಬೆಂಗಳೂರಿನ ಇಎಸ್‌ಐಸಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಭಾರತಿ ಅಭಿಪ್ರಾಯಪಟ್ಟರು.

ನಗರದಲ್ಲಿ ಮಂಗಳವಾರ ನಡೆದ ದೇವರಾಜ ಅರಸು ನರ್ಸಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ ಎಂ.ಎಸ್ಸಿ, ಬಿ.ಎಸ್ಸಿ ಹಾಗೂ ಜಿಎನ್‌ಎಂ ನರ್ಸಿಂಗ್ ಪದವೀಧರರಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿ, ಶುಶ್ರೂಷಕಿಯರ ಸೇವೆಗೆ ಹೆಸರಾಗಿರುವ ಫ್ಲೋರೆನ್ಸ್ ನೈಟಿಂಗೇಲ್ ಅವರು ನರ್ಸಿಂಗ್ ವಿದ್ಯಾರ್ಥಿಗಳಿಗೆ ಮಾದರಿ ಎಂದು ಅವರು ಹೇಳಿದರು.

ಪ್ರಥಮ ವರ್ಷದಿಂದ ಅಂತಿಮ ವರ್ಷದವರೆಗೂ ಶ್ರಮಪಟ್ಟು ಪಡೆದ ಪದವಿಯು ಅರ್ಥಪೂರ್ಣವಾಗಬೇಕಾದರೆ ಕರ್ತವ್ಯದಲ್ಲಿ ಸೇವಾ ಮನೋಭಾವ ಅಳವಡಿಸಿಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ದಾದಿಯರ ಸೇವೆ ಪ್ರಧಾನ ಪಾತ್ರ ವಹಿಸುತ್ತದೆ. ದಾದಿಯರು ಸದಾ ಕಾಲ ಮುಗುಳು ನಗೆಯಿಂದ ಕರ್ತವ್ಯ ನಿರ್ವಹಿಸಿದರೆ ರೋಗಿಗಳು ಬೇಗನೆ ಗುಣಮುಖರಾಗಿ ಆತ್ಮವಿಶ್ವಾಸ ಮೂಡಲು ಸಾಧ್ಯ ಎಂದರು.

ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಶ್ರಮದ ಜತೆಗೆ ಜ್ಞಾನ ಅವಶ್ಯಕ. ಸಂಕಷ್ಟದ ಸ್ಥಿತಿಯಲ್ಲಿರುವ ರೋಗಿಗಳಿಗೆ ಮಾತನಾಡಲು ಸಾಧ್ಯವಾಗದಿದ್ದರೂ ಶುಶ್ರೂಷಕಿಯರು ತಮ್ಮ ಜ್ಞಾನ ಶಕ್ತಿಯಿಂದ ಅವರ ಅವಶ್ಯಕತೆಗಳನ್ನು ಅರಿತು ಸೇವೆ ಸಲ್ಲಿಸಬೇಕು. ಪರಿಣಾಮಕಾರಿ ಕಾರ್ಯ ನಿರ್ವಹಣೆಗೆ ಶುಶ್ರೂಷಕಿಯರು ಸ್ಥಳೀಯ ಭಾಷೆ ಕಲಿಯುವುದು ಅತ್ಯಗತ್ಯ ಎಂದು ಸಲಹೆ ನೀಡಿದರು.

**ಬದ್ಧತೆ ಇರಬೇಕು:** ರೋಗಿಗಳ ಸೇವೆಯಲ್ಲಿ ಸ್ವಚ್ಛತೆ, ಶಿಸ್ತು, ಬದ್ಧತೆ ಮತ್ತು ಪ್ರಾಮಾಣಿಕತೆ ಇರಬೇಕು. ಸೇವೆಯು ರೋಗಿಗಳಲ್ಲಿ ಭವಿಷ್ಯದ ಆಶಾಭಾವನೆ ಮೂಡಿಸುವಂತಾಗಬೇಕು. ಈ ನಿಟ್ಟಿನಲ್ಲಿ ವೈದ್ಯರ ಚಿಕಿತ್ಸೆಗಿಂತ ದಾದಿಯರ ಸೇವೆ ಪ್ರಮುಖ ಪಾತ್ರ ವಹಿಸುತ್ತದೆ. ಕರ್ತವ್ಯದಲ್ಲಿ ಗುರುಗಳ ಮಾರ್ಗದರ್ಶನ ಅಳವಡಿಸಿಕೊಂಡರೆ ಗುರಿ ತಲುಪಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ರೋಗಿಗಳು ಆಸ್ಪತ್ರೆಗೆ ಬಂದ ತಕ್ಷಣ ಮೊದಲು ನರ್ಸ್‌ಗಳನ್ನು ಭೇಟಿಯಾಗುತ್ತಾರೆ. ನರ್ಸ್‌ಗಳು ಸ್ನೇಹದಿಂದ ಮಾತನಾಡಿಸುವುದರಿಂದಲೇ ಕಾಯಿಲೆ ಶೇ 50ರಷ್ಟು ವಾಸಿಯಾಗುತ್ತದೆ. ವೃತ್ತಿ ಜೀವನದಲ್ಲಿ ಸನ್ನಡತೆಯಿಂದ ಕಾರ್ಯ ನಿರ್ವಹಿಸಿದರೆ ವಿಶ್ವಾಸ ಗಳಿಸಲು ಸಾಧ್ಯ. ನಿರ್ಲಕ್ಷ್ಯದಿಂದ ಲೋಪ ಎಸಗಿದರೆ ಜೀವನದಲ್ಲಿ ಪಶ್ಚಾತಾಪ ಪಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾಲೇಜಿನ 43 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪ್ರಥಮ ವರ್ಷದ ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು. ಪ್ರಾಂಶುಪಾಲೆ ಡಾ.ಜಿ.ವಿಜಯಕುಮಾರಿ ಕಾಲೇಜಿನ ವಾರ್ಷಿಕ ವರದಿ ವಾಚಿಸಿದರು.

ದೇವರಾಜ ಅರಸು ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ನಿರ್ದೇಶಕ ಜಿ.ರಾಜೇಂದ್ರ, ಕುಲಪತಿ ಡಾ.ಎಸ್.ಕುಮಾರ್, ಉಪ ಕುಲಪತಿ ಡಾ.ಸಿ.ವಿ.ರಘುವೀರ್, ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ವಿ. ಲಕ್ಷ್ಮಯ್ಯ, ನರ್ಸಿಂಗ್ ಕಾಲೇಜಿನ ಉಪ ಪ್ರಾಂಶುಪಾಲೆ ರಾಧಾ ಭಾಗವಹಿಸಿದ್ದರು.

**ಮುಖ್ಯಾಂಶಗಳು**

- ಸೇವಾ ಮನೋಭಾವ ಅಳವಡಿಸಿಕೊಳ್ಳಿ
- ಶ್ರಮದ ಜತೆಗೆ ಜ್ಞಾನ ಅವಶ್ಯಕ
- ಸ್ಥಳೀಯ ಭಾಷೆ ಕಲಿಕೆ ಅತ್ಯಗತ್ಯ

ಕನ್ನಡಪ್ರಭ



# ಶುಶ್ರೂಷಕಿಯರಿಗೆ ವೃತ್ತಿ ಕೌಶಲ ತರಬೇತಿ ಅಗತ್ಯ

**ಕೋಲಾರ:** ಶುಶ್ರೂಷಕಿಯರು ವಿದ್ಯಾಭ್ಯಾಸದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆದುಕೊಳ್ಳಬೇಕಾದ ಅಗತ್ಯವಿದೆ ಎಂದು ಬೆಂಗಳೂರಿನ ಇಎಸ್‌ಐಸಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ. ಎಂ.ಭಾರತಿ ತಿಳಿಸಿದರು.

ನಗರದ ದೇವರಾಜ ಅರಸು ಮಹಾವಿದ್ಯಾಲಯದ ನರ್ಸಿಂಗ್ ಕಾಲೇಜಿನಲ್ಲಿ ಮಂಗಳವಾರ ನಡೆದ ಘಟಿಕೋತ್ಸವದಲ್ಲಿ ಎಂಸ್ಸಿ, ಬಿಎಸ್ಸಿ ಹಾಗೂ ಜಿಎನ್ಎಂ ನರ್ಸಿಂಗ್ ಪದವಿದರರಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿ, ನರ್ಸಿಂಗ್ ಸೇವೆಯಲ್ಲಿ ಖ್ಯಾತಿಗಳಿಸಿರುವ ಫ್ಲಾರೆನ್ಸ್ ನೈಟಿಂಗೇಲ್ ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

**ಸೇವಾ ಮನೋಭಾವ ಬೆಳೆಸಿಕೊಳ್ಳಿ:** ಪ್ರಥಮ ವರ್ಷದಿಂದ ಅಂತಿಮ ವರ್ಷದವರೆಗೂ ಶ್ರಮಪಟ್ಟು ಪಡೆದ ಪದವಿಯೂ ಅರ್ಥ ಪೂರ್ಣವಾಗ ಬೇಕಾದರೆ ನಿಮ್ಮಲ್ಲಿ ಸೇವಾ ಮನೋಭಾವನೆಯನ್ನು ಕರ್ತವ್ಯದಲ್ಲಿ ಆಳವಡಿಸಿ ಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಸರ್ಸಿಂಗ್ ಸೇವೆ ಪ್ರಧಾನ ಪಾತ್ರ ವಹಿಸುತ್ತದೆ. ಸೇವೆ ಸಲ್ಲಿಸುವಾಗ ಸದಾ ಕಾಲ ಮುಗಳು ನಗೆಯಿಂದ ಕರ್ತವ್ಯ ನಿರ್ವಹಿಸಿದಾಗ ರೋಗಿಯು ಬೇಗನೆ ಗುಣ ಮುಖ ಹೊಂದುವ ಆತ್ಮವಿಶ್ವಾಸ ಬರಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

**43 ಮಂದಿಗೆ ಪದವಿ ಪ್ರದಾನ:** ಒಟ್ಟು 43 ಮಂದಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕೋರಲಾಯಿತು. ಪ್ರಾಂಶುಪಾಲೆ ಡಾ.ಜಿ.ವಿಜಯಕುಮಾರಿ ಕಾಲೇಜಿನ ವಾರ್ಷಿವರದಿಯನ್ನು ವಾಚಿಸಿದರು. ದೇವರಾಜ ಅರಸು ವಿದ್ಯಾಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್, ಟ್ರಸ್ಟಿ ಜೆ.ರಾಜೇಂದ್ರ, ಕುಪಲತಿ ಡಾ.ಎಸ್.ಕುಮಾರ್, ಉಪ ಕುಲಪತಿ ಡಾ.ಸಿ.ವಿ.ರಘುವೀರ್, ರಿಜಿಸ್ಟ್ರಾರ್ ಡಾ.ಎ.ವಿ.ಎಂ. ಕುಟ್ಟಿ, ವೈದ್ಯಕೀಯ ಅಧೀಕ್ಷಕ ಡಾ.ವಿ.ಲಕ್ಷ್ಮಯ್ಯ, ಕಾರ್ಯನಿರ್ವಾಹಕ ಎಂಜಿನಿಯರ್ ಎಚ್. ಹನುಮಂತರಾವ್ ಮತ್ತಿತರರು ಇದ್ದರು.

ಕೋಲಾರಪತ್ರಿಕೆ



# ನರ್ಸಿಂಗ್ ಶಿಕ್ಷಣ ಪಡೆಯುವವರು ನೈಟಿಂಗೇಲ್ ಆದರ್ಶ ಪಾಲಿಸಲು ಕರೆ





ಕೋಲಾರ ಫೆ ೨೭

ನರ್ಸಿಂಗ್ ಸೇವೆಯಲ್ಲಿ ಖ್ಯಾತಿ ಗಳಿಸಿರುವ ಫ್ಲಾರೆನ್ಸ್ ನೈಟಿಂಗಲ್‌ರ ಮಾರ್ಗದರ್ಶನವನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಬೆಂಗಳೂರಿನ ಇಎಸ್‌ಐಸಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲೆ ಡಾ|| ಎಂ. ಭಾರತಿ ಸಲಹೆ ನೀಡಿದರು.

ದೇವರಾಜ ಅರಸು ಮಹಾವಿದ್ಯಾಲಯದ ರಜತೋತ್ಸವ ಸಭಾಂಗಣದಲ್ಲಿ ನಡೆದ ಆರ್. ಎಲ್. ಜಾಲಪ್ಪ ನರ್ಸಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ ಎಂಸ್ಸಿ, ಬಿಎಸ್ಸಿ, ಜಿಎನ್‌ಎಂ ನರ್ಸಿಂಗ್ ಪದವೀಧರರಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು ಶುಶ್ರೂಷಕಿಯರು ಶಿಕ್ಷಣದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆಯುವ ಅಗತ್ಯವಿದೆ' ಎಂದರು.

ಶ್ರಮಪಟ್ಟು ಪಡೆದ ಪದವಿ ಅರ್ಥಪೂರ್ಣವಾಗ ಬೇಕಾದರೆ ನಿಮ್ಮಲ್ಲಿ ಸೇವಾ ಮನೋಭಾವವನ್ನು ಕರ್ತವ್ಯದಲ್ಲಿ ಅಳವಡಿಸಿಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ನರ್ಸಿಂಗ್ ಸೇವೆ ಪ್ರಧಾನ ಪಾತ್ರ ವಹಿಸುತ್ತದೆ. ಸೇವೆ ಸಲ್ಲಿಸುವಾಗ ಸದಾ ಕಾಲ ಮುಗುಳ್ನಗೆಯಿಂದ ಕರ್ತವ್ಯ ನಿರ್ವಹಿಸಿದಾಗ ರೋಗಿಯು ಬೇಗನೆ ಗುಣಮುಖ ಹೊಂದುವ ಆತ್ಮ ವಿಶ್ವಾಸ-ಬರಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಆಧುನಿಕ ವಿಜ್ಞಾನ ಯುಗ

ಪ್ರಾಂಶುಪಾಲೆ ಡಾ|| ಜಿ. ವಿಜಯಕುಮಾರಿ ಕಾಲೇಜಿನ ವಾರ್ಷಿಕ ವರದಿ ವಾಚಿಸಿದರು.

ದೇವರಾಜ ಅರಸು ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಜಿ. ಎಚ್.ನಾಗರಾಜ್, ಟ್ರಸ್ಟಿ ಜೆ. ರಾಜೇಂದ್ರ, ಕುಲಪತಿ ಡಾ|| ಎಸ್.ಕುಮಾರ್, ಉಪ ಕುಲಪತಿ ಡಾ|| ಸಿ.ವಿ.ರಘುವೀರ್, ರಿಜಿಸ್ಟ್ರಾರ್ ಡಾ||ಎ.ವಿ.ಎಂ.ಕುಟ್ಟಿ, ವೈದ್ಯಕೀಯ ಅಧೀಕ್ಷಕ ಡಾ||ವಿ. ಲಕ್ಷ್ಮಯ್ಯ, ಕಾರ್ಯನಿರ್ವಾಹಕ ಎಂಜಿನಿಯರ್, ಎಚ್. ಹನುಮಂತರಾವ್, ನರ್ಸಿಂಗ್ ಕಾಲೇಜಿನ ಉಪ ಪ್ರಾಂಶುಪಾಲೆ ರಾಧ ಮೊದಲಾದವರು ಭಾಗವಹಿಸಿದ್ದರು.

**ಸೋಮೇಶ್ವರ ಮತ್ತು**

ಸಂಯುಕ್ತ ಕರ್ನಾಟಕ



# ನರ್ಸಿಂಗ್ ಸೇವೆ ಹರ್ಷ ತರಲಿ



**ಸಂ.ಕ ಸಮಾಚಾರ ಕೋಲಾರ**

ನರ್ಸಿಂಗ್ ಸಿಬ್ಬಂದಿಯ ಸೇವೆ ರೋಗಿಯ ನೋವನ್ನು ಮರೆಸಿ ನಗು ಮೂಡಿಸುವಂತಾದಾಗ ವೃತ್ತಿಯಲ್ಲಿ ಸಾರ್ಥ ಕತೆ ಸಿಗುತ್ತದೆ ಎಂದು ಬೆಂಗಳೂರಿನ ಇಎಸ್ಐಸಿ ನರ್ಸಿಂಗ್ ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಭಾರತಿ ಹೇಳಿದರು.

ಮಂಗಳವಾರ ದೇವರಾಜ ಅರಸು ನರ್ಸಿಂಗ್ ಕಾಲೇಜು ಘಟಿಕೋತ್ಸವ ಉದ್ಘಾಟಿಸಿ ಮಾತನಾಡಿ ಅನುಭವ ಮತ್ತು ಅಧ್ಯಯನದ ಮೂಲಕ ವೃತ್ತಿ ಕೌಶಲ್ಯವನ್ನು ಪ್ರತಿದಿನ ಹೆಚ್ಚಿಸಿಕೊಳ್ಳುವ ಮೂಲಕ ರೋಗಿಗಳ ಆರೈಕೆಯಲ್ಲಿ ಗುಣಮಟ್ಟ ಹೆಚ್ಚಿಸಿಕೊಳ್ಳಬೇಕೆಂದರು.

ವೃತ್ತಿಯಲ್ಲಿ ಬದ್ಧತೆ ಕಾಯ್ದುಕೊಳ್ಳಬೇಕು. ನೌಕರಿ ಸಿಕ್ಕಿದೆಯೆಂಬ ಭರದಲ್ಲಿ ಅಧ್ಯಯನ ವಿಮುಖರಾದರೆ ರೋಗಿಗಳು ಸಂಕಷ್ಟಕ್ಕೆ ಸಿಲುಕುತ್ತಾರೆ. ವೈದ್ಯಕೀಯ ವೃತ್ತಿಯಲ್ಲಿ ಎದುರಾಗುವ ಸವಾಲುಗಳನ್ನು ಸಕಾರಾತ್ಮಕ ನಿರ್ಧಾರಗಳ ಮೂಲಕ ಯಶಸ್ವಿಯಾಗಿ ಎದುರಿಸ 'ಬೇಕೆಂದು ಸೂಚಿಸಿದರು.ರೋಗಿಯ ಜತೆಗೆ ಅವರ ಮಾತೃ ಭಾಷೆ ಯಲ್ಲೇ ಸಂವಹನ ಮಾಡುವ ಮೂಲಕ ಸ್ಥಳೀಯ ಭಾವನೆಗಳನ್ನು ಎತ್ತಿಹಿಡಿಯುವ ಹೃದಯ ವೈಶಾಲ್ಯ ನಿಮ್ಮದಾಗಲಿ. ಇಲ್ಲವಾದಲ್ಲಿ ರೋಗಿಯು ಇಂಗ್ಲೀಷ್‌ನ್ನು ಅರ್ಥಂಬರ್ಥ ಅರ್ಥ ಮಾಡಿ ಕೊಂಡು ಅನಾಹುತ–ಅಪಾರ್ಥ ಆಗುವ ಸಾಧ್ಯತೆ ಇರುತ್ತದೆ ಎಂದು ಹೇಳಿದರಲ್ಲದೇ ಟುಡೆ(ಇಂದು) ಪದವನ್ನು ಟುಡೈ(ಸಾವು) ಎಂದು ಹೇಳಿದ ನರ್ಸ್‌ನಿಂದಾದ ಅನಾಹುತವನ್ನು ಎಳೆಎಳೆ ಯಾಗಿ ಬಿಚ್ಚಿಟ್ಟರು. ಸಂಸ್ಥೆ ಕಾರ್ಯದರ್ಶಿ ಜಿ. ಎಚ್.ನಾಗರಾಜ್, ನಿರ್ದೇಶಕ ಜೆ. ರಾಜೇಂದ್ರ, ಕುಲಪತಿ ಡಾ.ಎಸ್.ಕುಮಾರ್, ಉಪ ಕುಲಪತಿ ಡಾ.ಸಿ.ವಿ.ರಘುವೀರ್, ರಿಜಿಸ್ಟ್ರಾರ್ ಡಾ.ಎವಿ ಎಂ ಕುಟ್ಟಿ, ಮೆಡಿಕಲ್ ಕಾಲೇಜ್ ಪ್ರಿನ್ಸಿಪಾಲ್ ಡಾ.ಎಂ. ಎಲ್.ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕ ಡಾ.ವಿ.ಲಕ್ಷ್ಮಯ್ಯ, ಎಕ್ಸಿಕ್ಯುಟೀವ್ ಇಂಜಿನಿಯರ್ ಎಚ್.ಹನುಮಂತರಾವ್, ಡಾ.ರಾಜೇಗೌಡ ಹಾಜರಿದ್ದರು.

## ಬೆಸ್ಟ್ ಸ್ಟೂಡೆಂಟ್‌ಗಳು

ಎಂ.ರಮ್ಯ(ಎಂಎಸ್ಸಿ), ಸ್ಟೆಫಿನಾಮ್ಯಾ ಥ್ಯೋ(ಬಿಎಸ್ಸಿ), ಮೆಗ್ರಿಪಿಯಾ(ಜಿಎನ್ ಎಂ) ಬೆಸ್ಟ್ ಸ್ಟೂಡೆಂಟ್ ಪ್ರಶಸ್ತಿಗೆ ಭಾಜನರಾದರು. ಡಿ.ಹೆಲನ್‌ಕುಮಾರಿ, ಎಂ.ರಮ್ಯಾ, ಪಿ.ಪವಿತ್ರಾ, ಮಾರ್ಥಾಶಾಲಿ, ಎಲ್.ಸೌಂದರ್ಯ, ಲೂವಿಸ್‌ಜಾನ್, ಕೊಚ್ಚಿರಾಣಿಜಾರ್ಜ್, ಸುಗನ್ಯಾ, ತಸ್ಲಿಮಾ, ದೀಪಲಕ್ಷ್ಮಿ, ಸಂಗೀತ, ಜೀನಾರೇಜಿ, ರಾಕಿಲಾಲ್, ಜಬೀನಾಜೋಬಿ, ಉಮಾ ದೇವಿ ಮತ್ತು ವಿ.ನಾಗಮಣಿ ರ್‍ಯಾಂಕ್ ಪಡೆದುಕೊಂಡಿದ್ದಾರೆ.